ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 04-07-2019

ಪಾಟಿ ಸವಾಲುಃ ಶ್ರೀ ಪಿ.ಕೆ.ಜಿ ವಕೀಲರಿಂದ

ನಮ್ಮ ಮತ್ತು ಪ್ರತಿವಾದಿಗಳ ಜಾಗವೂ ಒಂದಕ್ಕೊಂದು ಮುಟ್ಟಿಕೊಂಡ ಹಾಗೆ ಇದೆ ಎಂದರೆ ಸರಿ, ಪ್ರತಿವಾದಿಗಳು ನಮ್ಮ ಮೇಲೆ ಇದೇ ನ್ಯಾಯಾಲಯದಲ್ಲಿ ಓ.ಎಸ್ ನಂ. 154/1998 ರಲ್ಲಿ ನೀವು ಒತ್ತುವರಿ ಮಾಡಿದ್ದೀರಾ ಎಂದು ಸಿವಿಲ್ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ.

ಸದರಿ ದಾವೆಯು ಪ್ರತಿವಾದಿಗಳ ಪರವಾಗಿ ತೀರ್ಪು ಆಗಿತ್ತೆಂದರೆ ಸರಿ . ಸದರಿ ತೀರ್ಪಿನ ವಿರುದ್ದ ನಾವು ಮಡಿಕೇರಿಯ ಹಿರಿಂದು ಸಿವಿಲ್ ನ್ಯಾಯಾಲಯದಲ್ಲಿ ಆರ್.ಎ ನಂ. 28/2002 ರ ಪ್ರಕಾರ

ಮೇಲ್ಮನವಿಯನ್ನು ಹಾಕಿದ್ದೇವೆಂದರೆ ಸರಿ . ಸದರಿ ನಾವು ಹಾಕಿದ್ದ ಮೇಲ್ಮನವಿಯು ವಜಾ ಆಗಿತ್ತೆಂದರೆ ಸರಿ .

ಸದರಿ ದಾವೆಯ ಮೇಲೆ ನಾವು ಕರ್ನಾಟಕದ ಉಚ್ಚನಾಯಾಲಯದಲ್ಲಿ ಆರ್.ಎಸ್.ಎ 3241/2006 ರ ಪ್ರಕಾರ ಮೇಲ್ಮನವಿ ಹಾಕಿದ್ದೇವೆಂದರೆ ಸರಿ , ಸದರಿ ಮೇಲ್ಮನವಿಯು ವಿಚಾರಣೆಯಲ್ಲಿ ಬಾಕಿ ಇದ್ದಾಗ ಈ ನ್ಯಾಯಾಲಯದ ಆದೇಶವನ್ನು ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಮಾಡಿಸಿರಲ್ಲಿ ಎಂದರೆ ಸಾಕ್ಷಿಯು ಸದರಿ ಮೇಲ್ಮನವಿಯನ್ನು ನನ್ನ ತಂದೆ ನಡೆಸುತ್ತಿದ್ದರು ಎಂದು ನುಡಿದಿರುತ್ತಾರೆ.

ನಾನು ಆ ದಾವೆಯಲ್ಲಿ ಪಕ್ಷಗಾರನಾಗಿದ್ದೇನೆಂದರೆ ಸರಿ . ಇದೇ ನ್ಯಾಯಾಲಯದಲ್ಲಿ ಹಾಕಿದ್ದ ಎಕ್ಸಿಕ್ಯೂಷನ್ 7/2007 ರ ದಾವೆಯಲ್ಲಿ ಒತ್ತುವರಿ ಮಾಡಿದ ಜಾಗವನ್ನು ಬಿಡಿಸಲು ಕೇಳಿದ್ದೆ ಎಂದರೆ ಸರಿ .

ಸದರಿ ದಾವೆ ಆದೇಶದ ಪ್ರಕಾರ ಪ್ರತಿವಾದಿಗಳು ಅವರ ಜಾಗ ಜೊತೆಗೆ ನಮ್ಮ ಜಾಗವನ್ನು ಸಹ ತೆಗೆದುಕೊಂಡಿದ್ದರು. ನಾನು ಸದರಿ ಎಕ್ಸಿಕ್ಯೂಷನ್ 7/2007 ದಾವೆಯನ್ನು ನಾನು ನನ್ನ ವಕೀಲರ ಮುಖಾಂತರ ಹಾಜರಾಗಿದ್ದೇನೆಂದರೆ ಸರಿ . ಮತ್ತು ಸದರಿ ದಾವೆಯನ್ನು ನನ್ನ ತಂದೆಯವರು ನಡೆಯುತ್ತಿದ್ದರು.

ಸದರಿ ಎಕ್ಸಿಕ್ಯೂಷನ್ 7/2007 ಅನ್ನು ಪ್ರತಿವಾದಿಗಳು ಆದೇಶದಂತೆ ತಮ್ಮ ಜಾಗ ಬಂದಿದೆ ಎಂದು ತೃಪ್ತಿಕರವಾದ ನಂತರ ಅದನ್ನು ಮುಗಿಸಿದರು ಎಂದರೆ ನನಗೆ ಗೊತ್ತಿಲ್ಲ.

ಎಕ್ಸಿಕ್ಯೂಷನ್ 7/2007 ನಲ್ಲಿ ನ್ಯಾಯಾಲಯದ ಆದೇಶದ ಪ್ರಕಾರ ಸ್ವಾದೀನಕ್ಕೆ ಪಡೆಯುವ ಮುಂಚೆ ಸರ್ವೆಯರ್ ಮತ್ತು ಅಮೀನರು ಬಂದು ಸರ್ವೆ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮತ್ತು ಸದರಿ ಮಾಹಿತಿಯೂ ನಮ್ಮ ಮನೆಯವರಿಗೆ ಗೊತ್ತಿಲ್ಲ.

ಸರ್ವೆಯರ್ ಮತ್ತು ಅಮೀನರು ಬಂದು ಸರ್ವೆ ಮಾಡಿಸಿದ ನಂತರ ನ್ಯಾಯಾಲಯಕ್ಕೆ ನೀಡಿದ ವರದಿಯ ಮೇರೆಗೆ ನಾನು ಯಾವುದೇ ತಕರಾರು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ವಿರುದ್ಧ ಹಾಕಿದ್ದ ದಾವೆ ನಡೆಸಲು ನಾನು, ನನ್ನ ಅಣ್ಣ ಪೂವಯ್ಯ ಮತ್ತು ನನ್ನ ತಂದೆ ಬರುತ್ತಿದ್ದೇವು.

ಸದರಿ ಎಕ್ಸಿಕ್ಯೂಷನ್ 7/2007 ನಲ್ಲಿ ಜಾಗವೂ ಪಡೆದ ನಂತರ ನ್ಯಾಯಾಲಯದ ಮೂಲಕ ಜಾಗವನ್ನು ಪಡೆದ ನಂತರವೂ ನಾವು ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆಂದು 7 ನೇ ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ ಓ.ಎಸ್ 33/2013 ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ . ಸದರಿ ಪ್ರಕರಣವೂ ನಮ್ಮ ವಿರುದ್ಧ ತೀರ್ಮಾನವಾಗಿದೆ ಎಂದರೆ ಸರಿ .

ನಾವು ಈ ದಾವೆಯನ್ನು ದಾಖಲಿಸುವ ಮೊದಲು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೆಯನ್ನು ಮಾಡಿಸಿದ್ದೇವೆ. ಈ ದಾವಾ ಸ್ವತ್ತು ಮತ್ತು 7 ನೇ ಪ್ರತಿವಾದಿಗಳು ಹಾಕಿದ ದಾವೆಯಲ್ಲಿರುವ ದಾವಾ ಸ್ವತ್ತುಗಳು ಅಕ್ಕ ಪಕ್ಕದ ಜಾಗಗಳು ಎಂದರೆ ಸರಿ . ಪ್ರತಿವಾದಿಗಳು 2015 ನೇ ಇಸವಿಯಲ್ಲಿ ಮತ್ತು ನಾವು ದಾವೆಯನ್ನು ಹಾಕು ಮುಂಚೆನೇ ದಾವಾ ಸ್ವತ್ತನ್ನು ಒತ್ತುವರಿ ಮಾಡಿಸಿಕೊಂಡಿರುತ್ತಾರೆ.

ಸರ್ವೆ ಮಾಡುವ ದಿನಾಂಕ ನಾವು ಅಕ್ಕ ಪಕ್ಕದ ಜಾಗದವರಿಗಾಗಲಿ ಮತ್ತು ನಮ್ಮ ಜಾಗದ ಭಾಜುದಾರರಿಗೆ ನಾವು ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಸದರಿ ಸರ್ವೆಯನ್ನು ಮಾಡಿಸಿದಾಗ ಸರ್ವ ಮಾಡಿಸಿದ ಅಧಿಕಾರಿಯ ಒತ್ತುವರಿ ಆಗಿದ ಬಗ್ಗೆ ತಿಳಿಸಿದ್ದು , ದಾವಾ ಸ್ವತ್ತಿನ ಮೊದಲನೆ ಷೆಡ್ಯೂಲ್ ನಲ್ಲಿ ವಿವರಿಸಿದ ಸರ್ವೆ ನಂ. ನಲ್ಲಿ ಸುಮಾರು 60-70 ಸೆಂಟ್ ನ್ನು ಒತ್ತುವರಿ ಮಾರಿದ ಬಗ್ಗೆ ತಿಳಿಸಿರುತ್ತಾರೆ.

ಸದರಿ ಸರ್ವೆ ಮಾಡಿದ ಬಗ್ಗೆ ನಕ್ಷೆಯನ್ನು ಮತ್ತು ವರದಿನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೇ. ಸದರಿ ಸರ್ವೆ ಮಾಡಿದ ಬಗ್ಗೆ ನಕ್ಷೆಯನ್ನು ಮತ್ತು ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯನ್ನು ನಾನು ದಾಖಲು ಮಾಡುವ ಮೊದಲು ಸರ್ವೆಯನ್ನು ಮಾಡಿಸಿಲ್ಲ ಎಂದರೆ ಸರಿಯಲ್ಲ. ಎಕ್ಸಿಕ್ಯೂಷನ್ 7/2007 ರ ಪ್ರಕಾರ ಪ್ರತಿವಾದಿಗಳು ಜಾಗವನ್ನು ಪಡೆದುಕೊಂಡ ನಂತರ ತಮ್ಮ ಜಾಗಕ್ಕೆ ಬೇಲಿ ಹಾಕಿಕೊಂಡರು ಎಂದರೆ ಸಾಕ್ಷಿಯು ನನ್ನ ಜಾಗವನ್ನು ಸೇರಿಸಿಕೊಂಡು ಬೇಲಿ ಹಾಕಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳು ಬೇಲಿ ಹಾಕಿಕೊಳ್ಳುವ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಬಂದು ಸದರಿ ವಿಷಯದ ಬಗ್ಗೆ ತಕರಾರು ಎತ್ತಲು ನನಗೆ ಗೊತ್ತಿಲ್ಲ . ಮತ್ತು ಆ ಸಮಯದಲ್ಲಿ ಬೇಲಿ ಹಾಕಿದ್ದು

ಗೊತ್ತಿಲ್ಲ. ಸದರಿ ಒತ್ತುವರಿಯನ್ನು ದಾವಾ ಸ್ವತ್ತಿನ ಐಟಂ ನಂ. 1 ರ ಸರ್ವೆ ನಂ. ನಲ್ಲಿ ತಿಳಿಸಿದ ಜಾಗದ ಉತ್ತರಕ್ಕೆ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನಾನು ಹೇಳಿರುತ್ತೇನೆ.

ದಾವಾ ಸ್ವತ್ತಿನ ಐಟಂ ನಂ. 2 ರ ಸರ್ವೆ ನಂ. ನಲ್ಲಿ ತಿಳಿಸಿದ ಜಾಗದ ಪಶ್ಚಿಮ ಮತ್ತು ಉತ್ತರಕ್ಕೆ ಪ್ರತಿವಾದಿಗಳು 10 ಸೆಂಟ್ ಒತ್ತುವರಿ ಮಾಡಿಕೊಂಡಿದ್ದಾರೆ . ದಾವಾ ಸ್ವತ್ತಿನ ಐಟಂ ನಂ. 3 ರ ಸರ್ವೆ ನಂ. ನಲ್ಲಿ ತಿಳಿಸಿದ ಜಾಗದ ದಕ್ಷಿಣಕ್ಕೆ ಪ್ರತಿವಾದಿಗಳು 7-8 ಸೆಂಟ್ ಒತ್ತುವರಿ ಮಾಡಿರುತ್ತಾರೆ.

ಸದರಿ ದಾವಾ ಸ್ವತ್ತಿನ ಷಡ್ಯೂಲ್ ನಲ್ಲಿ ತಿಳಿಸಿದ ಮೂರು ಐಟಂ ಗಳಲ್ಲಿ ಒಟ್ಟು ಒತ್ತುವರಿ ಸರ್ವೆ ಅಧಿಕಾರಿಯು ಸರ್ವೆ ಮಾಡಿದ ನಂತರ ನೀಡಿದ ವರದಿಯ ಮೇಲೆ ನಾನು ಹೇಳುತ್ತಿದ್ದೇನೆ.

ಸದರಿ ದಾವಾ ಸ್ವತ್ತಿನ ಷಡ್ಯೂಲ್ ನಲ್ಲಿ ತಿಳಿಸಿದ ಮೂರು ಐಟಂ ಗಳಲ್ಲಿ ಒತ್ತುವರಿ ಯಾವ ದಿಕ್ಕಿನಲ್ಲಿ ಆಗಿರುತ್ತದೆ ಎಂದು ನನ್ನ ವಕೀಲರಿಗೆ ಹೇಳಿರುತ್ತೇನೆ. ಮತ್ತು ಸದರಿ ಸರ್ವೆ ಮಾಡಿದ ದಿನ ನನ್ನ ವಕೀಲರು ಅಲ್ಲೇ ಇದ್ದರು .

ನಾನು ಯಾವುದೇ ಸರ್ವೆಯನ್ನು ದಾವಾ ಸ್ವತ್ತಿನ ಪ್ರತಿ ಮಾಡಿಸಿರುವುದಿಲ್ಲ , ಅಂದಾಜಿನ ಮೇಲೆ ದಾವೆಯನ್ನು ಹಾಕಿದ್ದೇನೆಂದರೆ ಸರಿಯಲ್ಲ . ಸರ್ವೆಯನ್ನು ಮಾಡಿದ ಸರ್ವೆ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ , ಸದರಿ ಅಧಿಕಾರಿಯನ್ನು ನಮ್ಮ ವಕೀಲರು ಕರೆದುಕೊಂಡು ಬಂದಿರುತ್ತಾರೆ.

ಸರ್ವೆ ಮಾಡುವ ಮೊದಲು ನಮ್ಮ ಜಾಗದ ಹದ್ದು ಬಸ್ತಿನ ಗುರುತನ್ನು ಮಾಡಿಕೊಡುವಂತೆ ನಾವು ತಹಶೀಲ್ದಾರ್ ಗೆ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ . ನಿಪಿ 35 ರಿಂದ 43 ರಲ್ಲಿರುವ ದಾಖಲೆಗಳು ನನ್ನ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲಾ ಅಂದರೆ ಸರಿಯಲ್ಲ. ನಿಪಿ 44 ನನ್ನ ದಾವೆಗೆ ಪೂರಕವಾಗಿರಲಿ ಎಂದು ಪ್ರತಿವಾದಿಗೆ ಕಳಹಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ಸ್ಕೆಚ್ ಗಳನ್ನು ನನ್ನ ದಾವೆಗೆ ಪೂರಕವಾಗಿ ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನಿಪಿ 63 ಮತ್ತು 65 ರ ದಾಖಲೆಗಳನ್ನು ಈ ದಾವೆಗೆ ಪೂರಕವಾಗಿ ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಸದರಿ ದಾಖಲೆಗಳ ಮೇಲೆ ತಹಶೀಲ್ದಾರ್ ಆಗಲೀ, ಪೊಲೀಸ್

ರವರ ಆಗಲೀ ಯಾವುದೇ ಸೀಲುಗಳು ಇಲ್ಲಾ. ನಿಪಿ 63 ಮತ್ತು 65 ನಾನು ತಹಶೀಲ್ದಾರ್ , ಪೊಲೀಸ್ ರವರಿಗೆ ನೀಡಿದ ಅರ್ಜಿಗಳು ಅಲ್ಲಾ ಎಂದರೆ ಸರಿಯಲ್ಲ , ನನ್ನ ಅರ್ಜಿಯಾದ ನಿಪಿ 63 ಮತ್ತು 65 ನಾನು ತಹಶೀಲ್ದಾರ್ ಮತ್ತು ಪೊಲೀಸ್ ರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ . ಅದು ನನ್ನ ಗಮನಕ್ಕೆ ಬಂದಿರುವುದಿಲ್ಲ .

ನಾನು ನನ್ನ ದಾವಾ ಸ್ವತ್ತಿನಲ್ಲಿ ತಿಳಿಸಿದ 3 ಐಟಂ ಗಳಿಗೆ ಪ್ರತಿವಾದಿಗಳು ಯಾವುದೇ ತೊಂದರೆ ಯಾಗಲೀ, ಒತ್ತುವರಿಯಾಗಲೀ ಮಾಡಿಲ್ಲಾ ಎಂದರೆ ಸರಿಯಲ್ಲ . ಸದರಿ ನನ್ನ ದಾವಾ ಆಸ್ತಿಗಳ ಮಾರುಕಟ್ಟೆಯ ಮೌಲ್ಯ ನನಗೆ ಗೊತ್ತಿರುವುದಿಲ್ಲ. ನನಗೆ ದಾವಾ ಆಸ್ತಿಯ ಅಂದಾಜು ಮೌಲ್ಯ ಗೊತ್ತಿರುವುದಿಲ್ಲ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಜಾಗಗಳ ಮೌಲ್ಯಗಳನ್ನು ನಿರ್ಧರ ಮಾಡಿರುತ್ತಾರೆ ಎಂದರೆ ಸರಿ .

ದಾವಾ ಸ್ವತ್ತಿನಲ್ಲಿರುವ ಒಟ್ಟು 3 ಐಟಂಗಳ ಮಾರುಕಟ್ಟೆಯ ಬೆಲೆ ಸುಮಾರು 6 ಲಕ್ಷ ಇರಬಹುದೆಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತಿನ ಜಾಗವೂ ನನ್ನ ಸ್ವಾದೀನದಲ್ಲಿದೆ , ಪ್ರತಿವಾದಿಗಳು ಯಾವುದೇ ಒತ್ತುವರಿಯನ್ನು ಮಾಡಿಕೊಂಡಿಲ್ಲಾ ಎಂದರೆ ಸಾಕ್ಷಿಯು ನನ್ನ ಜಾಗವೂ ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳು ನಮ್ಮ ಮೇಲೆ ಎಕ್ಸಿಕ್ಯೂಷನ್ ದಾವೆಯನ್ನು ಹಾಕಿ ತಮ್ಮ ಜಾಗವನ್ನು ಪಡೆದ ಕಾರಣ ಸೇಡು ತೀರಿಸಿಕೊಳ್ಳುವುದಕೊಸ್ಕರ ನಾನು ಸದರಿ ದಾವೆಯನ್ನು ಪ್ರತಿವಾದಿಗಳ ಮೇಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ , ಈ ದಾವೆಗೆ ಸಂಬಂಧಿಸಿದ ರೆವಿನ್ಯೂ ದಾಖಲೆಗಳನ್ನು ಬಿಟ್ಟು ಉಳಿದ ಎಲ್ಲಾ ದಾಖಲೆಗಳನ್ನು ನಾನು ಈ ದಾವೆಗೊಸ್ಕರ ಸೃಷ್ಟಿಸಿಕೊಂಡಿದ್ದೇನೆಂದರೆ ಸುಳ್ಳು .

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.